## ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 737
ಉತ್ತರ ದಿನಾಂಕ : 05.03.2021.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳು ಯಾವುವು, ಪ್ರಸ್ತುತ ಪ್ರಾರಂಭಗೊಂಡಿರುವ ಜಲ ಜೀವನ್ ಮಿಷನ್ (ಜೆಜೆಎಮ್) ಯೋಜನೆಯ ಉದ್ದೇಶ ಹಾಗೂ ಕಾರ್ಯಗಳು, ಮಾರ್ಗಸೂಚಿಗಳು ಯಾವುವು; | ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳ ವಿವರ ಈ ಕೆಳಕಂಡಂತಿವೆ.<br><br>**ಕೇಂದ್ರ ಪುರಸ್ಕೃತ ಯೋಜನೆಗಳು:**<br>1. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಖಾತ್ರಿ ಯೋಜನೆ.<br>2. ಸ್ವಚ್ಛ ಭಾರತ್ ಅಭಿಯಾನ.<br>3. ಗ್ರಾಮ ಪಂಚಾಯತಿಗಳಿಗೆ 15ನೇ ಹಣಕಾಸು ಆಯೋಗದ ಅನುದಾನ.<br><br>**ರಾಜ್ಯ ಯೋಜನೆಗಳು:**<br>1. ಸುವರ್ಣ ಗ್ರಾಮೋದಯ / ಗ್ರಾಮ ವಿಕಾಸ / ಮುಖ್ಯಮಂತ್ರಿ ಗ್ರಾಮ ವಿಕಾಸ.<br>2. ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಅನುದಾನ.<br>3. ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಅನುದಾನ.<br><br>ಕೇಂದ್ರ ಸರ್ಕಾರವು "ಜಲ್ ಜೀವನ್ ಮಿಷನ್" ಯೋಜನೆಯಡಿ ಎಲ್ಲಾ ಮನೆಗಳಿಗೂ 2024ರೊಳಗಾಗಿ ಕಾರ್ಯಾತ್ಮಕ ನಳ ನೀರು ಸಂಪರ್ಕ (Functional Household Tap Connection) ಕಲ್ಪಿಸುವ ಉದ್ದೇಶ ಹೊಂದಿರುತ್ತದೆ. |
| ಆ) | ಜಲ ಜೀವನ್ ಮಿಷಿನ್ (ಜೆಜೆಎಮ್) ಯೋಜನೆಯನ್ನು ರೂಪಿಸುವ ಪೂರ್ವದಲ್ಲಿ ನೀರಿನ ಮೂಲ ಮತ್ತು ಅವುಗಳ ಇಳುವರಿ ಸಾಮರ್ಥ್ಯದ ಕುರಿತು ತಾಂತ್ರಿಕ ಅಭಿಪ್ರಾಯವನ್ನು ಪಡೆಯಲಾಗುವುದೇ; ಇಲ್ಲವಾದಲ್ಲಿ ಯೋಜನೆಯಿಂದ ಸಾರ್ವಜನಿಕ ಹಣದ ದುರುಪಯೋಗವಾದಂತಾಗವುದನ್ನು ಸರಕಾರ ಗಮನಿಸಿದೆಯೇ; | ಜಲ ಜೀವನ್ ಮಿಷನ್ (ಜೆಜೆಎಮ್) ಯೋಜನೆಯನ್ನು ರೂಪಿಸುವ ಪೂರ್ವದಲ್ಲಿ ಜಲಮೂಲಗಳನ್ನು ಪರಿಗಣಿಸುವ ಕುರಿತು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ Source Finding Committee ಯನ್ನು ರಚಿಸಲಾಗಿದೆ (ಸರ್ಕಾರಿ ಆದೇಶ ಅನುಬಂಧದಲ್ಲಿ ಲಗತ್ತಿಸಿದೆ).<br><br>ಯೋಜನೆಯ ಸಫಲತೆಯ ದೃಷ್ಟಿಯಿಂದ ನೀರಿನ ಮೂಲ ಮತ್ತು ಸುಸ್ಥಿರತೆಯನ್ನು ಆಧರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. |

| | | |
|---|---|---|
| ಇ) | ಈ ಯೋಜನೆಯಲ್ಲಿ ಕಾಮಗಾರಿಯ ಅಂದಾಜು ಮೊತ್ತದ ಶೇ.10ರಷ್ಟನ್ನು ಕಡ್ಡಾಯವಾಗಿ ಸಾರ್ವಜನಿಕರಿಂದ ವಂತಿಗೆ ಸಂಗ್ರಹಿಸುವ ನಿಬಂಧನೆ ಇರುವುದೇ; ಒಂದು ವೇಳೆ ಸಾರ್ವಜನಿಕರು ವಂತಿಗೆ ನೀಡಲು ನಿರಾಕರಿಸಿದರೆ ಯೋಜನೆ ಸ್ಥಗಿತಗೊಳ್ಳುವುದೇ; ಅಂತಹ ಸಂದರ್ಭದಲ್ಲಿ ಬದಲಿ ಅನುದಾನ ವ್ಯವಸ್ಥೆಯನ್ನು ಸರ್ಕಾರ ಮಾಡುವುದೇ? | ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಮುದಾಯ ವಂತಿಕೆಯನ್ನು ಸಂಗ್ರಹಿಸುವುದು ಕಡ್ಡಾಯವಾಗಿದ್ದು, ಆದ್ಯತೆ ಪ್ರದೇಶಗಳನುಸಾರ ಬಂಡವಾಳ ವೆಚ್ಚದ ಶೇ.5ರಷ್ಟು ಸಮುದಾಯ ವಂತಿಕೆಯನ್ನು ಗುಡ್ಡಗಾಡು, ಅರಣ್ಯ ಪ್ರದೇಶ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಹಾಗೂ ಶೇ.10ರಷ್ಟು ಸಮುದಾಯ ವಂತಿಕೆಯನ್ನು ಇತರೆ ಪ್ರದೇಶಗಳಲ್ಲಿ ಪಡೆದು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಯಲ್ಲಿ ತಿಳಿಸಲಾಗಿರುತ್ತದೆ.<br><br>ಮುಂದುವರೆದು, ಗ್ರಾಮ ಪರಿಮಿತಿಯಲ್ಲಿನ ಕಾಮಗಾರಿಗಳ ಸುಸ್ಥಿರತೆಗಾಗಿ, ಬಂಡವಾಳ ವೆಚ್ಚದ ಶೇ.10ರಷ್ಟು ಮೊತ್ತವನ್ನು ಹಂತ ಹಂತವಾಗಿ ಸಮುದಾಯಕ್ಕೆ ಪ್ರೋತ್ಸಾಹ ಧನವನ್ನಾಗಿ ನೀಡಲಾಗುತ್ತದೆ.<br><br>ಆಯಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು Implementing Support Activity ಸಮಾಲೋಚಕರನ್ನು ನೇಮಿಸಿದ್ದು, ಸದರಿಯವರ ಸಹಾಯದಿಂದ ಜೆ.ಜೆ.ಎಂ ಯೋಜನೆಯ ಬಗ್ಗೆ ಗ್ರಾಮ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರದಿಂದ ಅರಿವು ಮೂಡಿಸಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ (VWSC)ಯ ಸಹಭಾಗಿತ್ವದೊಂದಿಗೆ ಸಮುದಾಯ ವಂತಿಕೆಯನ್ನು ಪಡೆಯಲಾಗುತ್ತಿದೆ. |

ಸಂ:ಗ್ರಾಕುನೀ&ನೈಇ 54 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

**ಕೆ.ಎಸ್. ಈಶ್ವರಪ್ಪ**
**ಗ್ರಾಮೀಣಾಭಿವೃದ್ಧಿ ಮತ್ತು**
**ಪಂಚಾಯತ್ ರಾಜ್ ಸಚಿವರು**